ನೀಡಲಾಗಿದೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಮಾನ್ಯ ಅಧ್ಯಕ್ಷರೆ, ಅಥಣಿ ಪಟ್ಟಣದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಪ್ರಸ್ತಾವನೆಯನ್ನು ನಗರಸಭೆಯಿಂದ ಯಾವಾಗ ಸಲ್ಲಿಸಲಾಯಿತು ಮತ್ತು ಕರ್ನಾಟಕ ಜಲಮಂಡಲಿಯಿಂದ ಈ ಪ್ರಸ್ತಾವನೆ ಯಾವಾಗ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಯಿತು? ಅದರ ಬಗ್ಗೆ ವಿವರಗಳನ್ನು ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) ಮುಖ್ಯ ಮಂತ್ರಿಗಳ ಪರವಾಗಿ: ಅಥಣಿ ಪಟ್ಟಣಕ್ಕೆ ಸುಮಾರು 444.84 ಲಕ್ಷ ರೂಪಾಯಿಗೆ ದಿನಾಂಕ 30.6.2001ರಂದು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಅದಕ್ಕೆ ಪ್ರಸ್ತಾವನೆಯನ್ನು ದಿನಾಂಕ:26.5.2001ರಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರ ಇದರ ತೀವ್ರತೆಯನ್ನು ಪರಿಗಣಿಸಿ ಅಥಣಿ ಪಟ್ಟಣಕ್ಕೆ ಕುಡಿಯುವ ನೀರಿನ ಅನುಕೂಲತೆ ಹೆಚ್ಚಾಗಬೇಕೆಂದು ಹೇಳಿ, ಅಲ್ಲಿನ ಶಾಸಕರ ಒತ್ತಾಯದ ಮೇರೆಗೆ ಮಂಜೂರಾತಿಯನ್ನೂ ಕೂಡ ನೀಡಿದ್ದೇವೆ. ಅದೇ ರೀತಿ ಟೆಂಡರ್ ಕರೆದು ಆದಷ್ಟು ಬೇಗ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಅಥಣಿ ನಗರಕ್ಕೆ ಈಗಿರುವಂತಹ ಕುಡಿಯುವ ನೀರಿನ ಯೋಜನೆ 1964ರಲ್ಲಿ ಮಂಜೂರಾಗಿ ಸುಮಾರು 30 ವರ್ಷಗಳ ಹಿಂದೆ ಅನುಷ್ಠಾನಕ್ಕೆ ಬಂದಿತ್ತು. ತದನಂತರ ಅಲ್ಲಿ ಶಾಂತಿ ನಗರ, ಉದ್ಯಾನಗರ, ಉತ್ತರಪುರಂ ಹಾಗೂ ಶಂಕನಗರ ಬಡಾವಣೆಗಳು ಹುಟ್ಟಿಕೊಂಡು ಸುಮಾರು ಮೂರು ಪಟ್ಟು ಜನಸಂಖ್ಯೆ ಹೆಚ್ಚಿಗೆಯಾಗಿ ಕುಡಿಯುವ ನೀರಿನ ಕೊರತೆ ಬಂದನಂತರ, 10 ವರ್ಷಗಳಿಂದ ಎರಡನೆ ಹಂತದ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕೆಂದು ಒತ್ತಾಯ ಇತ್ತು. ಈ ದಿಸೆಯಲ್ಲಿ ನಾವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಾಗ, ಅದು ದಿನಾಂಕ 26.5.2001ರಂದು ಸರ್ಕಾರದ ಮುಂದೆ ಪ್ರಸ್ತಾವನೆ ಬಂದು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರಿಗೆ ಈ ಯೋಜನೆಯನ್ನು ಆದಷ್ಟು ಬೇಗ ಮಂಜೂರು ಮಾಡಿ ಕಾರ್ಯಗತಗೊಳಿಸಬೇಕೆಂದು ವಿನಂತಿ ಮಾಡಿಕೊಂಡಿದ್ದೆ. ಅದಕ್ಕೆ 4.50 ಕೋಟಿ ರೂಪಾಯಿಗೆ ಕೇವಲ 35 ದಿವಸಗಳಲ್ಲಿ ಮಂಜೂರು ಮಾಡಿ ಕೊಟ್ಟಿರುವುದಕ್ಕೆ ಅಥಣಿ ಪಟ್ಟಣದ ಸಮಸ್ತ ನಾಗರೀಕರ ಪರವಾಗಿ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಸರ್ಕಾರಕ್ಕೆ ಹಾಗೂ ಇಲಾಖೆಗೆ ಸಲ್ಲಿಸುತ್ತೇನೆ. ಸರ್ಕಾರ ಯಾವ ರೀತಿ ಜನರಿಗೆ ಸ್ಪಂದಿಸುತ್ತದೆ ಎನ್ನುವುದಕ್ಕೆ ಕೈಗನ್ನಡಿಯಾಗಿದೆ ಅದಕ್ಕೆ ಅಭಿನಂದನೆಗಳು.

ತುಂಗಾಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ.

268(2014)

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ತುಂಗಭದ್ರಾ ಜಲಾಶಯದ ನೀರಿನ ಮಟ್ಟ ಮತ್ತು ಸಂಗ್ರಹಣಾ ಸಾಮರ್ಥ್ಯ ಎಷ್ಟು?

ಆ. ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹಣವಾದ ನೀರನ್ನು ಜಲಾಶಯದ ವ್ಯಾಪ್ತಿಯಲ್ಲಿ ಬರುವ ಮುಖ್ಯ ಕಾಲುವೆಗಳಿಗೆ ಒಂದು ವರ್ಷಕ್ಕೆ ಬಚಾವತ್ ಅವಾರ್ಡಿನ ಪ್ರಕಾರ ಎಷ್ಟು ಟಿ.ಎಂ.ಸಿ. ನೀರನ್ನು ಹಂಚಲಾಗಿದೆ. (ವಿವರಗಳನ್ನು ಒದಗಿಸುವುದು)

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ತುಂಗಭದ್ರಾ ಜಲಾಶಯದ ನೀರಿನ ಮಟ್ಟ (ಗರಿಷ್ಟ) = 1633 ಅಡಿಗಳು

ಸಂಗ್ರಹಣಾ ಸಾಮರ್ಥ್ಯ

ಅ) ಮೂಲ ಸಾಮರ್ಥ್ಯ 1953 ರಲ್ಲಿದ್ದಂತೆ = 133 ಟಿ.ಎಂ.ಸಿ.

ಆ) 1953ನೇ ಹೈಡ್ರೋಗ್ರಾಫಿಕ್ ಸರ್ವೇಪ್ರಕಾರ = 111.507 ಟಿ.ಎಂ.ಸಿ.

ಆ. ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಬರುವ ಕರ್ನಾಟಕದ ಕಾಲುವೆಗಳಿಗೆ ಕೆಳಗಿನಂತೆ ನೀರಿನ ಪ್ರಮಾಣವನ್ನು ನಿಗದಿಪಡಿಸಲಾಗಿದೆ.

ಕ್ರಮ ಸಂಖ್ಯೆ	ಕಾಲುವೆಗಳು	ಬಚಾವತ್ ಅವಾರ್ಡಿನಂತೆ ನೀರಿನ ಪ್ರಮಾಣ (ಟಿ.ಎಂ.ಸಿ.)
1	ತುಂಗಭದ್ರಾ ಬಲದಂಡೆ ಕೆಳಮಟ್ಟ ಕಾಲುವೆ	22.50
2	ತುಂಗಭದ್ರಾ ಬಲದಂಡೆ ಮೇಲ್ಮಟ್ಟ ಕಾಲುವೆ	17.50
3	ರಾಯಬಸವಣ್ಣ ಕಾಲುವೆ	7.00
4	ನದಿಗೆ (ಎಎನ್‌ಸಿ+ಆರ್‌ಡಿಎಸ್)	2.49

5	ಎಡದಂಡೆ ಮುಖ್ಯ ಕಾಲುವೆ + ಎಡದಂಡೆ ಮೇಲ್ಭಾಗ ಕಾಲುವೆ	102.00
	ಒಟ್ಟು	151.49

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಶ್ರೀ ಹಂಪನಗೌಡ ಬಾದರ್ಲಿಯವರ ಪರವಾಗಿ): ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಜಲಾಶಯದ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಎಷ್ಟು ಎಂದು ಕೇಳಿದ್ದೇವೆ. ತಾವು ಎಡದಂಡೆಗೆ ಸಂಬಂಧಪಟ್ಟಹಾಗೆ 102 ಟಿ.ಎಂ.ಸಿ. ಎಂದು ಉತ್ತರವನ್ನು ಕೊಟ್ಟಿದ್ದೀರಿ. ನಾವು ಇದಕ್ಕೆ ಪೂರಕವಾಗಿ ಕೇಳುವಂಥಾದ್ದು ಏನೆಂದರೆ, ತಾವು ಈಗ ಸಿಂಗಟಾಲೂರು ಯೋಜನೆಯನ್ನು ಹಾಕಿಕೊಂಡಿದ್ದೀರಿ, ಅದನ್ನು ನಾವೂ ಕೂಡ ಸ್ವಾಗತ ಮಾಡುತ್ತೇವೆ. ಈಗ ನಾವು 83 ಟಿ.ಎಂ.ಸಿ. ನೀರನ್ನು ರಾಯಚೂರು ಭಾಗದವರು ಉಪಯೋಗ ಮಾಡುತ್ತೇವೆ. ಆದರೆ ಈಗ 11ಟಿಎಂ.ಸಿ. ನೀರನ್ನು ಬಚಾವತ್ ಆಯೋಗದ ತೀರ್ಪಿನ ಆಧಾರದ ಮೇಲೆ ಈ ಸಿಂಗಟಾಲೂರು ಪ್ರಾಜೆಕ್ಟ್‌ಗೆ ಅಳವಡಿಸಿಕೊಳ್ಳಲಾಗಿದೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಎಡದಂಡೆ ಕಾಲುವೆಯ 102 ಟಿ.ಎಂ.ಸಿ. ನೀರನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ. ಈಗ ಅದನ್ನು ಮಾಡಿಫಿಕೇಷನ್ ಮಾಡಿ ಸಿಂಗಟಾಲೂರಿಗೆ ಏನಾದರೂ ನೀರಿನ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆಯೇ, ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಮಾಹಿತಿಯನ್ನು ಕೊಟ್ಟ ನಂತರ ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರು ಮ್ಯಾಕ್ಸಿಮಮ್ ರಿಸರ್ವಾಯರ್ ಲೆವಲ್ ಬಗ್ಗೆ ಕೇಳಿದ್ದಾರೆ. ಅದು 1633 ಫೀಟ್ ಇದೆ. ಸ್ಟೋರೇಜ್ ಕೆಪಾಸಿಟಿ 133 ಟಿ.ಎಂ.ಸಿ. ಇದೆ. ಆದರೆ ಸ್ಟೋರೇಜ್ ಕೆಪಾಸಿಟಿ ಹಲವಾರು ಕಾರಣದಿಂದ ಸಿಲ್ಟಿಂಗ್‌ನಿಂದ ಕಡಿಮೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ನಮ್ಮ ಅಧ್ಯಯನದ ಪ್ರಕಾರ 21 ಟಿ.ಎಂ.ಸಿ.ಗಿಂತ ಹೆಚ್ಚು ಪ್ರಮಾಣದ ಸಿಲ್ಟೇಷನ್ ಈ ತುಂಗಭದ್ರಾ ಡ್ಯಾಮ್‌ನಲ್ಲಿ ಆಗಿ ಆ ಕೆಪಾಸಿಟಿ ಪ್ರಮಾಣವೂ ಕಡಿಮೆಯಾಗಿದೆ. ತುಂಗಭದ್ರಾ ಜಲಾಶಯದ ಮೂಲಕ, ಮುಖ್ಯ ಕಾಲುವೆಗಳ ಮುಖಾಂತರ ಬಚಾವತ್ ಅವಾರ್ಡ್‌ನಲ್ಲಿ ಯಾವ ರೀತಿಯಾಗಿ ನೀರು ಹಂಚಿಕೆಯಾಗಿತ್ತು, ಎಂಬ ಬಗ್ಗೆ ಮಾನ್ಯ ಸಂಪನಗೌಡ ಬಾದರ್ಲಿಯವರು ಹೇಳಿದ್ದರು. ಅದರ ವಿವರಗಳನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಇದರ ಕೆಪಾಸಿಟಿ ಕಡಿಮೆಯಾಗಿರುವುದರಿಂದ ಸಹಜವಾಗಿ ಯುಟಿಲೈಜೇಷನ್ ಕಡಿಮೆಯಾಗಿರುತ್ತದೆ. ಆ ಕೆಪಾಸಿಟಿ ಯಾವ ಪ್ರಮಾಣದಲ್ಲಿ ಕಡಿಮೆಯಾಗಿದೆಯೋ, ಆ ಪ್ರಮಾಣದಲ್ಲಿ ಪೂರ್ಣ ಪೂರ್ಣ ಸೆಟ್ ಆಗಿ ಯುಟಿಲೈಜೇಷನ್

ಕಡಿಮೆಯಾಗಿರುವಂಥಾದ್ದು. ತುಂಗಭದ್ರಾ ಸರ್ವಾಯರ್ ಮೂಲಕ ಕರ್ನಾಟಕ ರಾಜ್ಯ ಹಾಗೂ ಆಂಧ್ರಪ್ರದೇಶಕ್ಕೆ ಈ ಎರಡು ರಾಜ್ಯಕ್ಕೂ ಸಹಿತ ನೀರು ಹರಿದು ಹೋಗುತ್ತದೆ. ಈ ಪೂರ್ವೋತ್ತರ್ ಇಟ್ಟುಕೊಂಡು ನಾವು ನೀರನ್ನು ಹಂಚಿಕೆ ಮಾಡುತ್ತಿದ್ದೇವೆ. ಇವತ್ತು ತುಂಗಭದ್ರಾ ಜಲಾಶಯದೊಳಗೆ 1,621.6 ಫೀಟ್ ನೀರು ಬಂದಿದೆ ಎಂದರೆ 70.27 ಟಿ.ಎಂ.ಸಿ. ನೀರು ಇದೆ. ಇನ್ನು ಸಾಕಷ್ಟು ಪ್ರಮಾಣದಲ್ಲಿ ಇನ್‌ಫ್ಲೋ ಇದೆ. ಎಡದಂಡೆ ಕಾಲುವೆಗೆ ನೀರು ಬಿಡುವಂಥಾದ್ದು ಲೇಟಾಗುತ್ತದೆಂದು ತಿಳಿದುಕೊಂಡಿದ್ದರು. ಆದರೆ ಇನ್ನು ಇರುವಂತಹ ಕೆಲಸಗಳನ್ನು ಬಹಳ ತ್ವರಿತವಾಗಿ ಮುಗಿಸಿ 26ನೇ ದಿನಾಂಕದಂದು ಸಾಯಂಕಾಲ ನೀರು ಬಿಟ್ಟಿದ್ದೇವೆ. ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ 29,000 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿದ್ದೇವೆ, ಲೆಫ್ಟ್ ಬ್ಯಾಂಕ್ ಹೈ ಲೆವಲ್ ಕೆನಾಲ್‌ನಲ್ಲಿ 10 ಕ್ಯೂಸೆಕ್ಸ್ ಹಾಗೂ ರೈಟ್ ಬ್ಯಾಂಕ್ ಲೋ ಲೆವಲ್‌ನಲ್ಲಿ 23 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ. ರೈಟ್ ಬ್ಯಾಂಕ್ ಹೈ ಲೆವಲ್ ಕೆನಾಲ್‌ನಲ್ಲಿ 3,448 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ. ಈ ಎಲ್ಲಾ ಕೆನಾಲ್‌ಗಳು ಏನಿವೆ ಇದರಲ್ಲಿ 236 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ. ನಾವು ಈಗ ಸಧ್ಯಕ್ಕೆ ಬಿಟ್ಟಿರುವಂತಹ ನೀರಿನ ಪ್ರಮಾಣವಾಗಿದೆ. ಇನ್ನು ಮಾನ್ಯ ಅಮರೇಗೌಡ ಬಯ್ಯಾಪುರ ಲಿಂಗನಗೌಡರವರು ಹೇಳಿದ ಹಾಗೆ ಸಿಂಗಟಾಲೂರು ಪ್ರಾಜೆಕ್ಟ್‌ನಿಂದ ಏಸ್ತ್ರತವಾಗಿ ಹೊಸ ಪ್ರಾಜೆಕ್ಟ್ ಅನ್ನು ತೆಗೆದುಕೊಂಡಿದ್ದೇವೆ. ಇದರಿಂದ ನೀರಿನ ಕೊರತೆ ಆಗುತ್ತದೆಯೇ? ಎಂದು ಕೇಳಿದ್ದಾರೆ. ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ, ಸಿಂಗಟಾಲೂರಿನ ಏಸ್ತ್ರತ ಯೋಜನೆಯಿಂದ ಯಾವುದೇ ರೀತಿಯ ತೊಂದರೆ ಈ ತುಂಗಭದ್ರಾ ಎಡದಂಡೆ ಹಾಗೂ ಬಲದಂಡೆಗಾಗಲೀ ತೊಂದರೆಯಾಗದ ರೀತಿಯಲ್ಲಿ ನಾವು ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಇದರ ಜೊತೆಗೆ ತುಂಗಭದ್ರಾ ಜಲಾಶಯದಿಂದ ಒಂದು ಹನಿ ನೀರನ್ನು ಸಹಿತ ಸಿಂಗಟಾಲೂರು, ಹುಲಿದುರ್ಗ ಯೋಜನೆಗೆ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಒಂದು ತಪ್ಪು ಕಲ್ಪನೆಯಿಂದ ಏನಾಗಿದೆ ಎಂದರೆ ಸಿಂಗಟಾಲೂರು ಹತ್ತಿರ ಮೊದಲು ಡ್ಯಾಮ್ ಮಾಡಬೇಕೆಂದು ಇದ್ದೆವು. ಆಗ ಅಲ್ಲಿ ಜಲಾಶಯದಿಂದ ನೀರು ಸ್ವಲ್ಪಮಟ್ಟಿಗೆ ಬರುತ್ತಿತ್ತು. ಹೀಗಾಗಿ ಜಲಾಶಯದಿಂದ ನೀರನ್ನು ತೆಗೆದುಕೊಳ್ಳುತ್ತಿದ್ದಾರೆಂದು ಕೆಲವು ಆಸಕ್ತ ವರ್ಗದವರು ತಪ್ಪು ಮಾಹಿತಿಯನ್ನು ಬಹಳಷ್ಟು ಪ್ರಚಾರ ಮಾಡಿದರು. ಆದರೆ ನಾವು ಡ್ಯಾಮ್ ಅನ್ನು ಸಿಂಗಟಾಲೂರಿನಿಂದ ಅಂಬಿಗೆ ಶಿಫ್ಟ್ ಮಾಡಿದೆವು, ಇದು ಸುಮಾರು ಹತ್ತು ಕಿ.ಮೀ. ದೂರ ಹಿಂದಕ್ಕೆ ಹೋಗುವುದರಿಂದ ತುಂಗಭದ್ರಾ ಜಲಾಶಯದಿಂದ ಒಂದು ಹನಿ ನೀರನ್ನೂ ಸಹಿತ ಸಿಂಗಟಾಲೂರು ಯೋಜನೆಗೆ ತೆಗೆದುಕೊಳ್ಳುವುದಿಲ್ಲವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಜಲಾಶಯದಿಂದ ಹೊರಗಡೆ ಈ ಪ್ರಾಜೆಕ್ಟ್ ಮಾಡುತ್ತೇವೆಂದು ಹೇಳಿದರು, ನಮಗೆ ಸಂತೋಷ, ನಮಗೆ ನೀರು ಎರಡು ಟ್ರಿಮ್‌ನಲ್ಲಿ ಶಾಶ್ವತವಾಗುತ್ತದೆ. ಈ ಪ್ರಾಜೆಕ್ಟ್‌ಗೆ ಏನು ಸ್ಟೋರೇಜ್‌ಗೆ ಸಾಮರ್ಥ್ಯವಿದೆ, ಅದು ಬೇಸಿಗೆ ಮತ್ತು ಮಳೆಗಾಲದಲ್ಲಿ ಅಂದರೆ

ಮಳೆಗಾಲದಲ್ಲಿ ನಮಗೆ ತೊಂದರೆಯಾಗುವುದಿಲ್ಲ. ಆದರೆ ಬೇಸಿಗೆಯಲ್ಲಿ ಏನಾಪ್ಲೋ ಬರುತ್ತದೆ, ಅದನ್ನು ತಡೆ ಹಿಡಿದಾಗ ಅಪ್ಪಾ ಸಿಂಗಟಾಲೂರು ಪಾಜೆಕ್ಟ್‌ಗೆ ವಿಶೇಷ ಯೋಜನೆಯನ್ನು ಹಾಕಿದ್ದರು. ಈಗ ಎಕ್ಸಿಸ್ ವಾಟರ್ ಹೋಗುತ್ತದೆ, ಅವರು ಸರ್ವೆ ಮಾಡಿದ್ದಾರೆ, ಏನು ಸುಮಾರು 20 ವರ್ಷಗಳಿಂದ ಎಕ್ಸಿಸ್ ವಾಟರ್ ನಮಗೆ ಹರಿದು ಹೋಗುತ್ತಿದೆ. ಅದನ್ನು ನಾವು ನೀವು ಬಿಟ್ಟುಕೊಳ್ಳುತ್ತೇವೆ, ಕರ್ನಾಟಕ ರಾಜ್ಯದ ನೀರಿನ ಪಾಲನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ. ತಾವು ಸಿಂಗಟಾಲೂರು ಪಾಜೆಕ್ಟಿಗೆ ಸಂಬಂಧಪಟ್ಟಂತೆ ಏನು ರೂಪುರೇಷೆಗಳನ್ನು ಹಾಕಿಕೊಂಡಿದ್ದೀರಿ? ನಾವು 19 ಟಿ.ಎಂ.ಸಿ. ನೀರನ್ನು ಬಳಕೆ ಮಾಡುತ್ತಿದ್ದೇವೆ, ಯಾವ ರೀತಿಯಲ್ಲಿ ಅದನ್ನು ಸಂಗ್ರಹಣೆ ಮಾಡುತ್ತಿದ್ದೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರಿಗೂ ಏಲ್ಲಾ ಗೊತ್ತಿರುವಂತಹ ವಿಚಾರವಾಗಿದೆ. ನಾವು ಸಿಂಗಟಾಲೂರು ಯೋಜನೆಯಾಗಲೀ, ಅಪ್ಪರ್ ಭದ್ರಾ ಯೋಜನೆಯಾಗಲೀ ಇವುಗಳನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಾವು ತಗೆದುಕೊಳ್ಳಬೇಕಾಗುತ್ತದೆ, ಏಕೆಂದರೆ ತುಂಗಭದ್ರಾದಲ್ಲಿ ಸುಮಾರು 311 ಟಿ.ಎಂ.ಸಿ. ಯಿಂದ 82 ಟಿ.ಎಂ.ಸಿ. ನೀರು ಪ್ರತಿವರ್ಷ ಹರಿದು ಹೋಗುತ್ತಿದೆ. ಅವರೇಜ್ 125 ಟಿ.ಎಂ.ಸಿ. ಹೆಚ್ಚುವರಿ ನೀರು ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತಿದೆ. ನಮ್ಮ ರಾಜ್ಯದ ಪಾಲು 729 ಟಿ.ಎಂ.ಸಿ. ನೀರನ್ನು ರಾಜ್ಯದ ರೈತರುಗಾಗಿ ಉಪಯೋಗ ಮಾಡುವಂಥಾದ್ದು ನಮ್ಮ ಕರ್ತವ್ಯವಾಗಿದೆ, ಈ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ನಾವು ಅಪ್ಪರ್ ತುಂಗಭದ್ರಾ ಸಿಂಗಟಾಲೂರು ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಈಗ 1976ರಿಂದ ನನ್ನ ಬಳಿ ಇರುವ ಮಾಹಿತಿಯ ಪ್ರಕಾರ 1994-95ರವರೆಗೆ ನೀರು ಹೆಚ್ಚುವರಿಯಾಗಿ ಹರಿದು ಹೋಗುತ್ತಿದೆ. **Surplus water. it is just flowing into Andhra; ultimately it might have gone to sea** ಈ 290 ಟಿ.ಎಂ.ಸಿ. 300, 311, 159, 267, 130 ಟಿ.ಎಂ.ಸಿ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹರಿದು ಹೋಗುವಂಥಾದ್ದನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಇದನ್ನು ಬರ ಸಂಭವನೀಯ ಪ್ರದೇಶಗಳಿಗೆ, ಫ್ಲೋರೈಡ್ ಅಫೆಕ್ಟ್ ಆಗಿ, ಮತ್ತೆ ಸೋಡಿಯಂ ಕಾರ್ಬೋನೇಟ್‌ನಿಂದ ತೊಂದರೆಯಾಗಿರುವಂತಹ ರೈತರು ಯಾರಿದ್ದಾರೆ ಆ ಪ್ರದೇಶಗಳಿಗೆ ನೀರಾವರಿಯನ್ನು ತೆಗೆದುಕೊಂಡು ಹೋಗುವಂತಹ ಪ್ರಯತ್ನವನ್ನು ಈ ಯೋಜನೆಯಲ್ಲಿ ಮಾಡಲಾಗಿದೆ. ಈಗ ನೀರಾವರಿಯ ಪ್ರಯೋಜನವನ್ನು ಯಾರು ಪಡೆಯುತ್ತಿದ್ದಾರೆ, ಅವರಿಗೆ ತೊಂದರೆಯಾಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ಮತ್ತೆ ಈಗಾಗಲೇ ಮೊನ್ನೆ ಈ ವಿಚಾರವಾಗಿ ಕರಪಂತಹ ಸಭೆಯಲ್ಲೂ ಹೇಳಿದ್ದೇನೆ. ತುಂಗಭದ್ರಾ ಡ್ಯಾಮ್ ಕೆಳಗಡೆ ಇರುವಂತಹ ನೀರಾವರಿ ಪ್ರದೇಶದಲ್ಲಿ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡಬೇಕೆಂಬ ಪ್ರಸ್ತಾವನೆ ಬಂದಿದೆ. ಬೆನ್ನೂರು ಹತ್ತಿರ ಒಂದು ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುವ ಸಲುವಾಗಿ ಸರ್ವೆ

ಮಾಡುವ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಇದರ ಬಗ್ಗೆ ಕೂಡ ಶೀಘ್ರವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ.ಶಂಕರರೆಡ್ಡಿ (ಸಿರಗುಪ್ಪ): ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಏಪ್ರಿಲ್ ತಿಂಗಳಿಗೆ ಬಿಡುವಂತಹ ನೀರಿನ ಪ್ರಮಾಣದ ಬಗ್ಗೆ ಹೇಳಿದರು. ನಾನು ಮಾನ್ಯ ಮಂತ್ರಿಯವರಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ ಆಂಧ್ರಪ್ರದೇಶಕ್ಕೆ ನೀರು ಹರಿದು ಹೋಗುತ್ತಿದೆ. ಅವರು ಇಷ್ಟು ಕ್ಯೂಸೆಕ್ಸ್ ನೀರು ಬರಲೇ ಬೇಕೆಂದು ಹೇಳುತ್ತಾರೆ, ಇದು ಆದ ಮೇಲೆ ನಮ್ಮ ಕರ್ನಾಟಕ ರಾಜ್ಯದ ಕ್ಷೇತ್ರಗಳಿಗೆ ಬರುತ್ತದೆ. ಆ ಕಡೆಯಿಂದ ನಮಗೆ ಎಷ್ಟು ಕ್ಯೂಸೆಕ್ಸ್ ನೀರು ಬರಬೇಕೋ ಅಷ್ಟು ನೀರು ಬರುತ್ತಿಲ್ಲ, ನಾವು ಟೇಲ್ ಎಂಡ್ ರೈತರಾಗಿ ನಮ್ಮ ಭಾಗದಲ್ಲಿ ಸಾಕಷ್ಟು ಅನ್ಯಾಯವಾಗಿದೆ. ಆಂಧ್ರಪ್ರದೇಶದ ಬಾರ್ಡರ್‌ಗೆ ಇಷ್ಟು ಕ್ಯೂಸೆಕ್ಸ್ ನೀರು ಕೊಡಬೇಕೆಂದು ಹೇಗೆ ಹೇಳಲಾಗುತ್ತದೆಯೋ ಅದೇ ರೀತಿಯಲ್ಲಿ ಕರ್ನಾಟಕದ ಬಾರ್ಡರ್‌ನಲ್ಲಿರುವ ಜನರಿಗೂ ಕೂಡ ಸ್ಪಿಪ್ಯುಲೇಟೆಡ್ ಪ್ರಮಾಣದಲ್ಲಿ ನೀರು ಕೊಡಬೇಕೆಂದು ಆಂಧ್ರಪ್ರದೇಶ ಸರ್ಕಾರಕ್ಕೆ ಒತ್ತಾಯ ಮಾಡಬೇಕು, ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಆಂಧ್ರಪ್ರದೇಶದಿಂದ ಎಷ್ಟು ಪ್ರಮಾಣದಲ್ಲಿ ನೀರನ್ನು ಸಿರುಗುಪ್ಪ ತಾಲ್ಲೂಕಿನಲ್ಲಿ ಬಿಡಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ನೀರು ಬರುತ್ತಿಲ್ಲವೆಂಬುದು ಮಾನ್ಯ ಶಾಸಕರು ಹಾಗೂ ಅಲ್ಲಿಯ ರೈತರು ತಿಳಿಸಿದ್ದಾರೆ. ಅಲ್ಲೇನು ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸಲು ನಾವು ಯೋಗ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಬಳ್ಳಾರಿಯಲ್ಲೂ ಕೂಡ ಕೆಲವು ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡಿ ಎನ್ನುವ ಒತ್ತಾಯ ಇದೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳನ್ನು ಸ್ವಾಗತ ಮಾಡುತ್ತೇವೆ, ಎಷ್ಟು ಕಪಾಸಿಟಿಯ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುತ್ತಾರೆಂಬುದನ್ನು ತಿಳಿಸಬೇಕು. ಎರಡನೆಯದಾಗಿ ನಮ್ಮ ರಾಜ್ಯದಿಂದ ಹೆಚ್ಚುವರಿಯಾಗಿ ಹೋಗುತ್ತಿರುವ ನೀರನ್ನು ಬಳಸಿಕೊಳ್ಳುವ ವಿಚಾರದಲ್ಲಿ ನಮ್ಮ ಕೊಪ್ಪಳ ಹಾಗೂ ಪಡಗಲಿ ಕ್ಷೇತ್ರದಲ್ಲಿ ಆ ಪ್ರಾಜೆಕ್ಟ್ ನಿರ್ಮಾಣವಾಗುವ ಕಾಲದಲ್ಲಿ ಎರಡು ಕ್ಷೇತ್ರದ ಜನರು ತ್ಯಾಗ ಮಾಡಿದ್ದಾರೆ, ಆ ಸಿಂಗಟಾಲೂರು ಪ್ರಾಜೆಕ್ಟ್‌ನಿಂದ ವಿಶೇಷವಾಗಿ ಕೊಪ್ಪಳ ಕ್ಷೇತ್ರಕ್ಕೆ ಎಷ್ಟು ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಆ ಸಿಂಗಟಾಲೂರು ಪ್ರಾಜೆಕ್ಟ್ ನನ್ನ ಕ್ಷೇತ್ರಕ್ಕೆ ಬರುತ್ತದೆ, ಅದಕ್ಕೆ ಮಾನ್ಯ ಸಚಿವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈಗಾಗಲೇ

ಹೆಚ್ಚುವರಿ 100 ಟಿಎಂಸಿ ನೀರು ಹರಿದುಹೋಗುತ್ತಿದೆ ಎಂದು ತಾವು ಹೇಳುತ್ತಿದ್ದೀರಿ, ಕೇವಲ 19 ಟಿಎಂಸಿ ನೀರನ್ನು ಮಾತ್ರ ತೆಗೆದುಕೊಳ್ಳಲಾಗುತ್ತಿದೆ, ಬರಗಾಲ ಪ್ರದೇಶವಾಗಿರುವುದರಿಂದ ಇನ್ನೂ 20-30 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲವೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎ.ಎಲ್.ಬ್ಯಾಯಾಪುರ್: ಎಡದಂಡೆ ಕಾಲುವೆಯಲ್ಲಿ ಬರುವ ಟೇಲ್ ಎಂಡ್ ರೈತರಿಗೆ ಪ್ರತಿವರ್ಷ ತೊಂದರೆಯಾಗಿ ಸಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದೇವೆ, ಅದೇ ಕೆನಾಲ್‌ನಿಂದ ನೀರನ್ನು ಕಡಿಮೆ ಮಾಡಲು ಸರ್ಕಾರದಿಂದ ಆದೇಶ ಬಂದಿರುವುದನ್ನೂ ಕೂಡ ಗಮನಿಸಬೇಕಾಗುತ್ತದೆ. ಆ ರೈತರು ನೀರನ್ನು ಪತಕ್ಕೆ ಕಡಿಮೆ ಬಳಸಿಕೊಂಡರು? ಇಲ್ಲಿಯವರೆಗೆ ಕಾಲುವೆ ಸರಿಯಾದ ರೀತಿಯಲ್ಲಿರಲಿಲ್ಲ, ಎರಡು ವರ್ಷಗಳಲ್ಲಿ ಈಗ ಕಾಲುವೆ ಸುಸ್ಥಿತಿಯಾಗಿ ಮಾಡಿರುವುದರಿಂದ 102 ಟಿಎಂಸಿ ನೀರನ್ನು ಸಮರ್ಪಕವಾಗಿ ಈ ವರ್ಷದಿಂದ ಬಳಸಿಕೊಳ್ಳುತ್ತೇವೆ, ಈ ನಿಟ್ಟಿನಲ್ಲಿ ಏನೂ ಕೊರತೆಯಾಗದಂತೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ನೀರಿನ ಪ್ರಮಾಣವೆನ್ನುವ ಮಾಹಿತಿ ಸದ್ಯಕ್ಕೆ ನನ್ನಲ್ಲಿ ಲಭ್ಯವಿಲ್ಲ. ಅದನ್ನು ನಂತರ ಕೊಡುತ್ತೇನೆ. ಆದರೆ ನಮ್ಮ ಉದ್ದೇಶ ಕೊಪ್ಪಳ, ಗದಗ್ ಹಾಗೂ ಬಳ್ಳಾರಿ ಈ ಮೂರು ಜಿಲ್ಲೆಗಳಲ್ಲಿ ಎಷ್ಟು ನೀರಾವರಿ ಮಾಡಲು ಸಾಧ್ಯವೋ ಅಷ್ಟು ಮಾಡುವುದಾಗಿದೆ. ಬ್ಯಾಲೆನ್ಸಿಂಗ್ ರಿಸರ್ವಾಯರ್ ಕೆಪಾಸಿಟಿ ಬಗ್ಗೆ ಹೇಳುವುದಾದರೆ, ನಾವೇನು ಪ್ರಿಲಿಮಿನರಿ ಸರ್ವೆ ಮಾಡಿದ್ದೇವೆ, ಆ ಪ್ರಕಾರ 7-7.5 ಟಿಎಂಸಿಯವರೆಗೆ ನೀರು ಸಂಗ್ರಹಣೆ ಮಾಡಬಹುದೆಂದು ಪ್ರಿಲಿಮಿನರಿ ವರದಿ ನಮಗೆ ತಿಳಿಸಿದೆ, ಸರ್ವೆ, ಪ್ರಾಜೆಕ್ಟ್ ರಿಪೋರ್ಟ್, ಟೆಂಡರ್ ಡಾಕ್ಯುಮೆಂಟ್ ಸೂಚನೆಯನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ನೀರನ್ನು ಪತಕ್ಕೆ ಕಡಿಮೆ ಉಪಯೋಗಿಸಿಕೊಂಡರೆಂದು ಕೇಳಿದರು. ಇದು ಬಹಳ ಹಳೆಯ ಕೆನಾಲ್. ಅಲ್ಲಿ ಬಹಳ ಬ್ರೀಚ್ ಬರುತ್ತಿತ್ತು, ಅದನ್ನು ನಿಲ್ಲಿಸಲು ಇನ್ನಷ್ಟು ೯೦ ಕೋಟಿ ರೂಪಾಯಿಗಳ ಬೃಹತ್ ಸ್ಟೆಂಗ್ತನಿಂಗ್ ವರ್ಕ್ ತೆಗೆದುಕೊಂಡೆವು ಕಳೆದ ಮೂರು ವರ್ಷಗಳಿಂದ ಈ ಕೆಲಸ ತೆಗೆದುಕೊಂಡು ಪೂರ್ಣಗೊಳ್ಳುವ ಮಟ್ಟಕ್ಕೆ ತಂದಿದ್ದೇವೆ. ಆ ಡಿಸ್ಟ್ರಿಬ್ಯೂಟರಿಗಳೆಲ್ಲಾ ಹಾಳಾಗಿವೆ, ರಿಪೇರಿಯನ್ನು ರೈತರೇ ಮಾಡಿಕೊಳ್ಳಬೇಕಾಗಿತ್ತು, ಇಲ್ಲಿಯವರೆಗೆ ಸರ್ಕಾರವಾದರೂ ಮಾಡಿಸಬೇಕಾಗಿತ್ತು. ಅದನ್ನು ರಿಪೇರಿ ಮಾಡಿಸಲು ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ, ಈಗಾಗಲೇ ಕಾಲುವೆಗಳೆಲ್ಲಾ ಸರಿಯಾಗಿವೆ, ಇನ್ನು ಮುಂದೆ ಹೆಚ್ಚು ನೀರು ಉಪಯೋಗವಾಗಬಹುದು. ಮಾನ್ಯ ಎಸ್.ಎಸ್.ಪಾಟೀಲರ ಆಸೆ ಜಾಸ್ತಿಯಾಯಿತು, ಅವರ ಕ್ಷೇತ್ರದಲ್ಲಿ 69,000 ಕ್ಕಿಂತ ಹೆಚ್ಚು ಎಕರೆ ಭೂಮಿ ನೀರಾವರಿಯಾಗುತ್ತದೆ. ಅದೆಲ್ಲಾ ಬರಪ್ರದೇಶ ಹಾಗೂ ಫ್ಲೋರೈಡ್ ಅಫೆಕ್ಟೆಡ್ ಏರಿಯಾ, ಅವರು ಇನ್ನು ಹೆಚ್ಚು ಕೊಡಬೇಕೆಂದು ಹೇಳುತ್ತಾರೆ, ಕೊಡುವುದಾದರೆ ಕೊಪ್ಪಳ ಹಾಗೂ ಹಡಗಲಿ ಕಡೆ ಹೆಚ್ಚಿಗೆ ಮಾಡುವುದರ ಕಡೆ ಸರ್ಕಾರ ಗಮನಕೊಡುತ್ತದೆ.